1ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು** 1914-2021

**ಸಿ.ಡಬ್ಲ್ಯು -1, ಪಿ.ಡಬ್ಲ್ಯು -1**

**ಸಾಕ್ಷಿದಾರರ ಹೆಸರು** : ಸುವರ್ಣಮ್ಮ
ಗಂಡನ **ಹೆಸರು** : ಪುಟ್ಟಪ್ಪ
**ವಯಸ್ಸು** : 70 ವರ್ಷ
**ಉದ್ಯೋಗ** : ಗೃಹಿಣಿ
**ವಾಸ** : ಕಾಗೋಡು ಗ್ರಾಮ, ಸಾಗರ ತಾಲ್ಲೂಕು.

**ಪ್ರಮಾಣೀಕರಿಸಿದ ದಿನಾಂಕ :02.12.2025**

**<u>ಮುಖ್ಯ ವಿಚಾರಣೆ : ಸಸಅ ರಿಂದ</u>**

1. ಚಾಸ 2 ನನ್ನ 2ನೇ ಮಗ. ಚಾಸ 3 ಮತ್ತು 4 ರವರ ಪರಿಚಯವಿದೆ. 1ನೇ ಆರೋಪಿ ನನ್ನ 3ನೇ ಮಗ, 2ನೇ ಆರೋಪಿ ನನ್ನ ಸೊಸೆ. 3 ರಿಂದ 7ನೇ ಆರೋಪಿತರು 2ನೇ ಆರೋಪಿಯ ಸಂಬಂಧಿಕರು. ಸುಮಾರು 4 ವರ್ಷಗಳ ಹಿಂದೆ ರಾತ್ರಿ 9 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿ ಟಿ.ವಿ. ನೋಡುತ್ತಿದ್ದಾಗ ನನ್ನ ಮಗ 1ನೇ ಆರೋಪಿ ನನಗೆ ಒಂದು ಕಾಗದವನ್ನು ತಂದು ಸಹಿ ಮಾಡುವಂತೆ ಹೇಳಿದ, ಆಗ ನಾನು ಮಾಡುವುದಿಲ್ಲ ಎಂದು ಹೇಳಿದೆ, ಆಗ 1ನೇ ಆರೋಪಿ ನನ್ನ ಗಂಟಲನ್ನು ಹಿಚುಕಿದ. ಆಗ ನಾನು ಕೂಗಿದಾಗ ಚಾಸ 2 ಬಂದು ಏಕೆ ಅಮ್ಮನಿಗೆ ಹೊಡೆಯುತ್ತೀಯಾ ಎಂದು 1ನೇ ಆರೋಪಿಯನ್ನು ಕೇಳಿದಾಗ 30 ಜನರು ಒಟ್ಟಾಗಿ ಬಂದು ಅವರು ಎಲ್ಲಿದ್ದರೋ ಗೊತ್ತಿಲ್ಲ, ಅವರೆಲ್ಲರೂ ಬಂದು ಚಾಸ 2 ರವರಿಗೆ ಮತ್ತು ನನಗೆ ಹೊಡೆದರು. ಹೊಡೆದ ತಕ್ಷಣ ಪೊಲೀಸರು ಬಂದರು, ನಂತರ ಅವರೆಲ್ಲರೂ ಓಡಿ ಹೋಗಿ ಬಚ್ಚಿಟ್ಟುಕೊಂಡರು. ಪೊಲೀಸರು ಬಂದು ನನ್ನನ್ನು ಮತ್ತು ಚಾಸ 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದರು. ಆಸ್ಪತ್ರೆಯಲ್ಲಿ ನಾನು ನನ್ನ ಮಗ 1ನೇ ಆರೋಪಿಯ ವಿರುದ್ಧ ದೂರನ್ನು ನೀಡಿದೆನು.

2. ಸಾಕ್ಷಿಗೆ ಕಡತದಿಂದ ಒಂದು ದಾಖಲೆಯನ್ನು ತೆಗೆದು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಫಿರ್ಯಾದಾಗಿದ್ದು, ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಸ್ಥಳ ಮಹಜರ್ ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸ್ಥಳ ಮಹಜರ್ ಅನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2 (ಎ) ಎಂದು ಗುರುತಿಸಲಾಯಿತು.

ಮಾನ್ಯ ಸ.ಸ.ಅ. ರವರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.